415

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ನಂಬರ್.	ಬಾಬು ತರೀ ಖುಷ್ಕೀ ಬಾಗಾಯಿತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಮಗೈರೆ. ಕೂಡಿದ ಮಟ್ಟಿಗೆ ಕರಾರ್ಯೂಕಾ ತಪ್ಪಿಲ್ಲ.	ಹರಾಜು ಕೆಳಿ ಹಾರಿಖು ಮತ್ತು ಕಾಲ.	ಹರಾಜು ನಡಿಸತಕ್ಕವರ ಹೆಸರು.	ಕೆಲವು ಜಮೀನ್ಗಳಲ್ಲಿ ಸರ್ಕಾರದ ಸ್ವಾಧೀನಕ್ಕೆ ಸೇರಿದ ಮರಗಳು ಇರುವ ಪಕ್ಷ.	
1	2	3	4	5	6	7	8	9	10	11	
					ಎ. ಗುಂ.	ರೂ. ಆ. ಪೈ.					
ಚಿಕ್ಕಬಳ್ಳಾಪುರ	ಪೆಕೆನಂದ್ರು	ಬೊಮ್ಮಯನಹಳ್ಳಿ	1	ತರೀ	1—32	7 8 0	..	ಈ ಜಮೀನ್ಗಳ ಬಿ| 1896ನೇ ಇಸವಿ ಅಕ್ಟೋಬರ್ 26 ಯಿಪ್ಪತ್ತಾರನೇ ತಾರೀಖು ಸೋಮವಾರ ದಿವಸ 11 ಘಂಟೆಗೆ.	ಚಿಕ್ಕಬಳ್ಳಾಪುರದ ಅಮಲ್ದಾರ್.		ಈ ಜಮೀನ್ಗಳು ಈಗ ಇರುವ ಹಳೇ ಕಾಲ್ವೇ ನೀರಿನಿಂದಲೇ ಸಾಗುವದಕ್ಕೆ ಮಾಡಿಕೊಳ್ಳಬೇಕಾಗಿರುತ್ತೆ.
			9	ಖುಷ್ಕೀ	3—19	5 8 0	..				
			11	ತರೀ	3—10	22 0 0	ಜಾಲಿಗಿಡ 1				
			27	ತರೀ	0—18	3 0 0	..				
			108	ತರೀ	1—29	10 0 0	ಜಾಲಿಗಿಡ 2				
				ಖುಷ್ಕೀ	0—23						
			133	ತರೀ	1—17	8 0 0	ಡಿಟೋ 3				
				ಖುಷ್ಕೀ	0— 6						
			134	ತರೀ	0—24	4 8 0	ಡಿಟೋ 1				
				ಖುಷ್ಕೀ	0—39						
			127	ಖುಷ್ಕೀ	1—39	2 12 0	ಜಾಲೀ ಹುಂಗೀ ಮಗೈರೆ 202				
			1 127	ಡಿಟೋ	1—22	2 0 0					
			2 127	ಡಿಟೋ	2— 6	3 0 0					
			3 127	ಡಿಟೋ	1—37	2 12 0					
			4 26	ಖರಾಬು	0—15	ಖರಾಬು	..				
			1 28	ಡಿಟೋ	1—25	ಖರಾಬು	..				

ಸ್ಯೇ 26—28ನೇ ನಂಬರು ಖರಾಬು ಜಮೀನ್ಗಳಿಗೆ ಬಾಜೂ ಆಕಾರ ಕಂಡ ನಂಬರುಗಳ ದರದಂತೆ ದಾಖಲ್ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು.

1896ನೇ ಇಸವಿ ಆಗಸ್ಟ್ ತಾರೀಖು 11ರಲ್ಲು ನಡದ ತುಮಕೂರ್ ಡಿಸ್ಟ್ರಿಕ್ಟು ಫಂಡ್ ಬೋರ್ಡು ಪ್ರೊಸೀಡಿಂಗ್ಸ್.

ಅಫಿಷಿಯಲ್ ಮೆಂಬರುಗಳು ಹಾಜರ್.

1. ಕಲೆಕ್ಟರ್ ಡಳಾಳ್ ಸಾಹೆಬರವರು ತುಮಕೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್.
2. ,, ಮಿರ್ಕವಾಲುದ್ದಿ ಅಲ್ಲೀಖಾ ಸಾಹೆಬರವರು ಟ್ರೈಜರಿ ಅಸಿಸ್ಟೆಂಟ್ ಕಮ್ಮಿಷನರ್.
3. ,, ನಂಜಪ್ಪನವರು ತುಮಕೂರ್ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರರ್ಜ.
4. ,, ತುಮಕೂರ್ ತಾಲ್ಲೂಕು ಅಮಲ್ದಾರು ಮಹಮೆದ್ ರಜಾ ಸಾಹೆಬರವರು.
5. ಮೆಸ್ಸರ್ ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರು ಕಂಠೀರವಾಚಾರ್ರು.
6. ,, ಗುಬ್ಬೀ ತಾಲ್ಲೂಕು ಅಮಲ್ದಾರು ಸೀತಾರಾಮಯ್ಯನವರು.
7. ,, ಮಾವಗಡ ತಾಲ್ಲೂಕು ಅಮಲ್ದಾರು ರಾಘವೇಂದ್ರರಾಯರು.
8. ,, ತುಮಕೂರು ತಾಲ್ಲೂಕು ಅಮಲ್ದಾರು ಶಾಮರಾಯರು.

ಗೈರ್ ಹಾಜರಿ.

1. ಮೆಸ್ಟರ್ ನಾರಾಯಣರಾವ್ ಡೆಪ್ಯುಟಿ ಕಮ್ಮಿಷನರ್.
2. ,, ಮದ್ದಗಿರಿ ತಾಲ್ಲೂಕು ಅಮಲ್ದಾರ್ ಚವುಡಯ್ಯನವರು.
3. ಮೆಸ್ಟರ್ ಸಿರಾ ತಾಲ್ಲೂಕ ಅಮಲ್ದಾರ್ ವೇಣುಗೋಪಬೇಗಂ ಅಯ್ಯಂಗಾರು.
4. ,, ತಿಪಟೂರು ತಾ|| ಅಮಲ್ದಾರ್ ಶೇಷರಾಮಯ್ಯನವರು.

ನ್ಯೂ ಅಫಿಷಿಯಲ್ ಮೆಂಬರುಗಳು ಹಾಜರ್.

1. ಮೆಸ್ಟರ್ ರಾಮೆದಾಸಪ್ಪನವರು.
2. ,, ಶ್ರೀನಿವಾಸ ತಾತಾಚಾರ್ರು.
3. ಮೆಸ್ಟರ್ ಆಬಿದಲ್ಲೀ ಸಾಹೆಬರವರು.

ಗೈರ್ ಹಾಜರ್.

1. ಮೆಸ್ಟರ್ ಸೈಯದ್ ಮುನ್ತಫ಼ ಸಾಹೆಬರವರು.
2. ,, ಅಗಳಿ ಕೃಷ್ಣಪ್ಪನವರು.
3. ಮೆಸ್ಟರ್ ಚಿಕ್ಕಣ್ಣಶಟ್ಟರು.
4. ,, ಗಂಗಣ್ಣಶಟ್ಟರು.

1. ಮದ್ದಗಿರಿ, ಸಿರಾ, ಪಾವಗಡ ಮತ್ತು ತುರ್ವೇಕೆರೆ ಲೋಕಲ್ ಫಂಡ್ ಡಿಸ್ಪೆನ್ಸರಿಗಳಲ್ಲಿ ನೀರು ತರತಕ್ಕ ನೌಕರರು ತಮ್ಮ ಕೆಲಸದೊಂದಿಗೆ ಆಡಿಗೆಯನ್ನು ಸಹ ಮಾಡುವದಕ್ಕೋಸ್ಕರ ಹಾಲಿ ಅವರಿಗೆ ಸಲ್ಲುತ್ತಲಿರುವ ಮಾಹೆಯಾನಾ ತಲಬು ಅಲ್ಲದೆ ಫೀ ಇಸಂಗ 3 ರೂಪಾಯಿನಂತೆ ಅಲೌನ್ಸ್ ಕೊಡಬೇಕೆಂಬುವದನ್ನು ಮಂಜೂರ್ಮಾಡಿಯೂ ಮತ್ತು ಲೋಕಲ್‌ಫಂಡ್ ಡಿಸ್ಪೆನ್ಸರಿಗಳಲ್ಲಿ ಕಾಯಿಲೆ ಜನರ ತಿಂಡೀಖರ್ಚು ಡಿಸ್ಟ್ರಿಕ್ಟು ಫಂಡಿಗೇನೇ ಪೂರಾ ಹ್ಯಾಗೆ ದಾಖಲಾಗುವದೋ ಬಡಸ್ತೂರ್ ಮೇಲ್ಕಂಡ ಅಲೌನ್ಸು ಖರ್ಚು ಡಿಸ್ಟ್ರಿಕ್ಟು ಫಂಡಿಗೇನೆ ದಾಖಲ್ಮಾಡಬೇಕೆಂದು ತಲ್ಪಿದ 1896ನೇ ಇಸವಿ ಜುಲ್ಯೆ 9ನೇ ಮುಕ್ತಂ 462.—4 ಎಲ್. ಎಫ್. 112.—95ನೇ ನಂಬರ್ ಗವರ್ಮೆಂಟ್ ಪ್ರೊಸಿಡಿಂಗ್ಸನ್ನು ವೋದಲಾಯಿತು, ಮೇಲ್ಕಂಡ ಪ್ರೊಸಿಡಿಂಗ್ಸಿನಲ್ಲಿ ಗವರ್ಮೆಂಟಿನವರು ಅಪ್ಪಣೆ ಕೊಡಿಸಿರುವಂತೆ ನಡಿಸಲು 1896—97ನೇ ಸಾಲಿನ ಡಿಸ್ಟ್ರಿಕ್ಟು ಫಂಡ್ ಸಪ್ಲಿಮೆಂಟಲ್ ಬಜ್ಜಟ್ಟಿನಲ್ಲಿ ಆರ್ಳ್ಸಿಗಾಗಿ ಬೇಕಾಗುವ ವೊಬಲಗನ್ನು ದಾಖಲ್ ಮಾಡಬೇಕೆಂದು ತೀರ್ಮಾನ ವಾಯಿತು.

2. ಭಾರಿಯಾದ ಮತ್ತು ಅವಶ್ಯಕವಾದ ಕಾಮುಗಾರಿಗಳನ್ನ ನಡಿಸಬೇಕಾದ್ದಕ್ಕೆ ಡಿಸ್ಟ್ರಿಕ್ಟು ಫಂಡ್ ಬಾಬಿನಲ್ಲಿ ಸಾಲ್ ಬಸಾಲ್ ವಿಶೇಷವಾಗಿ ವುಳಿಯುವ ವೊಬಲಗನ್ನು ಉಪಯೋಗಿಸಿಕೊಳ್ಳಬೇಕೆಂಬ ವುದ್ದಿಶ್ಯ, ಇಲ್ಲದ ಪಕ್ಷ ಸಾಲ್ ಅಖೈರಿನಲ್ಲಿ ಕೇಕಡಾ 30 ರೂಪಾಯಿಗೆ ವಿುರಿ ವುಳಿಯುವ ವೊಬಲಗನ್ನು ಪುಪಯುಕ್ತವಾದ ಕಾಮುಗಾರಿಗಳಿಗೆ ಕ್ರಮೇಣ ವುಪಯೋಗಿಸುವದಕ್ಕಾಗಿ ಅಂಥಾ ಕಾಮುಗಾರಿಗಳ ವಿಚಾರದಲ್ಲಿ ಗವರ್ಮೆಂಟಿಗೆ ಬರದುಕೊಳ್ಳಬೇಕೆಂದು 1896ನೇ ಇಸವಿ ಜುಲ್ಯೆ 1ನೇ ಮುಕ್ತಂ 3 ಎಲ್. ಎಫ್. 280.—92ನೇ ನಂಬರ್ ಸೆಕ್ರಿಟರಿಯವರ ಅಫಿಷಿಯಲ್ ವಿುವೋರಾಂಡಂನಲ್ಲಿ ಕೇಳಿ 1889ನೇ ಇಸವಿ ಡಿಸೆಂಬರ್ 6ನೇ ಮುಕ್ತಂ. 6861.—70—157ನೇ ನಂಬರ್ ಅಫಿಷಿಯಲ್ ವಿುವೋರಾಂಡವಿುನ 9ನೇ ಪ್ಯಾರಾಕ್ಕೆ ಡೆಪ್ಯುಟಿ ಕಮ್ಮಿಷನರುಗಳು ನಿಗಾ ಕೊಡತಕ್ಕದ್ದೆಂದು ಬರಸಿರುವದನ್ನು ವೋದಲಾಯಿತು. ಈ ವಿಚಾರ ನೋಟ್ ಮಾಡಬೇಕೆಂತಲೂ ಕಳದ ಸಾಲಿನ ನೀಮಕಲು ಕಾಮುಗಾರಿಗಳನ್ನ ಪೂರೈಸುವದಕ್ಕೆ ಬೇಕಾಗುವ ವೊಬಲಗನ್ನೂ ಮತ್ತು ಹುಲಿಯೂರುದುರ್ಗ, ಸಿರಾ ಮತ್ತು ಹುಳಿಯಾರದಲ್ಲಿ ಕಟ್ಟಬೇಕಾಗಿರುವ ಮುನಾಫರ್‌ಖಾನಿಗೆ ವೊಬಲಗನ್ನು ಸಹ ಸೇರಿಸಿ 1896—97ನೇ ಸಾಲಿಗೆ ವಂದು ಸಪ್ಲಿಮೆಂಟಲ್ ಡಿಸ್ಟ್ರಿಕ್ಟ ಫಂಡ್ ಬಜ್ಜಟ್ಟನ್ನ ಗವರ್ಮೆಂಟಿಗೆ ಕಳುಹಿಸತಕ್ಕದ್ದೆಂತಲೂ ಸಹ ತೀರ್ಮಾನ ಮಾಡಲ್ಪಟ್ಟಿತು.

3. ಲೋಕಲ್ ಫಂಡ್ ಜನರಲ್ ಬಾಬಿನಿಂದ ಗವರ್ಮೆಂಟಿನವರು ಹಣವನ್ನ ಕೊಡದ ಪಕ್ಷ ನಿಂತುಹೋಗುವ ವೂರು ಆಣಿಕಟ್ಟುಗಳಿಗೆ ಕಾರಣವಾದ ಮುಖ್ಯ ಕಾಮುಗಾರಿಗಳು ಯಿದ್ದಲ್ಲಿ ಅಂಥಾ ಕಾಮುಗಾರಿಗಳಿಗೆ ವಂದು ಲೀಸ್ಟನ್ನೂ ಮತ್ತು ಯಲ್ಲಿ ಅತ್ಯವಶ್ಯಕವಾಗಿ ನೀರಿನ ವಸ್ತು ವುಂಟಾಗಬೇಕೆಂದು ಇರುವದೋ ಅಂಥಾ ಗ್ರಾಮಗಳಲ್ಲಿ ತೆಗೆಯಬೇಕಾಗುವ ಕೀನೀರು ಭಾವಿಗಳಿಗೆ ವಂದು ಲೀಸ್ಟನ್ನೂ ಸಹ ಕೂಡಿದ ಮಟ್ಟಿನ ಜಾಗ್ರತೆಯಲ್ಲಿ ಕಳುಹಿಸಬೇಕೆಂತಲೂ ಮತ್ತು 1896—97ನೇ ಸಾಲಿಗೆ ಪ್ರತಿ ಲೋಕಲ್‌ಫಂಡ್ ಸರಕಲೆಗೆ ಲೋಕಲ್‌ಫಂಡ್ ಜನರಲ್ ಯಂಬ ಬಾಬಿನ ಹಣ ಯಷ್ಟು ಬೇಕಾಗುತ್ತೆಂಬುವದನ್ನ ನಮೂದಿಸಬೇಕೆಂದ್ದನ್ನೂ ಸಹ 1896ನೇ ಇಸವಿ ಏಪ್ರಿಲ್ 6ನೇ ಮುಕ್ತಂ 11379.—86 ಎಲ್. ಎಫ್. 61.—95ನೇ ನಂಬರ್ ಗವರ್ಮೆಂಟ್ ಪ್ರೊಸಿಡಿಂಗ್ಸನ್ನ ವೋದಲಾಯಿ[redacted]ಟೂರು ಮತ್ತು ಕುಣಿಗಲ್ ತಾಲ್ಲೂಕು ಅಮಲ್ದಾರ್ರುಗಳು ನಮೂದಿಸಿರುವ ಕಾಮುಗಾರಿಗಳ ವಿಚಾರದಲ್ಲಿ ಕೇಳಿರುವ ಹೆಚ್ಚಿಲ್‌ಗಳನ್ನ ತರಿಸಿಕೊಂಡು ಕೂಡ್ಲೆ ಬೋರಡಿನವರು ವಪ್ಪಿರುವ ಕಾಮುಗಾರಿಗಳ ಯರಡು ಲೀಸ್ಟನ್ನ ಗವರ್ಮೆಂಟಿಗೆ ಕಳುಹಿಸುವದು ತೀರ್ಮಾನ ವಾಯಿತು.

4. ಸಿರಾ ತಾಲ್ಲೂಕಿನಲ್ಲಿ ದೊಡ್ಡೀದಾರರಿಗೆ ಸಲ್ಲಬೇಕಾದ ರುಸುಂ ಬಗೆ 11—13—5 ರೂಪಾಯಿಗಳು ಜಾಸ್ತಿ ಖರ್ಚವದರ ತಪ್ಯೀಲ್ ನಮೂದಿಸಿ ಸದರೀ ಖರ್ಚು ಯಾವ ವೊಬಲಗಿನಿಂದ ಹೊರಳ್ಳೇ ಆಗತಕ್ಕದ್ದೆಂದು ಬೋರಡಿನವರು ವಪ್ಪುಆ ಬಗ್ಯೆ ಬರಸಬೇಕೆಂದು ತಲ್ಪಿದ ಕಂಟ್ರೋಲರ್ ಸಾಹೆಬರವರ 1896ನೇ ಇಸವಿ ಆಗಸ್ಟ್ 4ನೇ ಮುಕ್ತಂ 268ನೇ ನಂಬ[redacted]ವೋದಲಾಗಿ ಸದರೀ ಜಾಸ್ತೀ ಖರ್ಚು 1895—96ನೇ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಜ್ಜಟ್ಟಿನ ಜನರಲ್ ಸೇವಿಂಗ್ಸಿನಲ್ಲಿ ಖರ್ಚು ಬೀಳತಕ್ಕದ್ದೆಂದು ತೀರ್ಮಾನವಾಯಿತು.

5. ಕುಣಿಗಲ್ ತಾಲ್ಲೂಕು ಅಮೃತೂರು ದೊಡ್ಡಕೆರೇ ಯೇರೀಮೇಲೆ ಹಾಲಿ ಇರುವ ಅಮೃತೂರಿಂದ ಹುಲಿಯೂರುದುರ್ಗಕ್ಕೆ ಹೋಗತಕ್ಕ ರಸ್ತೆಗೆ ಬದಲಾಗಿ ಅಮೃತೂರು ದೊಡ್ಡಕೆರೇ ಕೆಳಗೆ ಇರತಕ್ಕ ಗದ್ದೆಗಳಲ್ಲಿ ವಂದು ರಸ್ತೆಯನ್ನ ಹಾಕಲು 820 ರೂಪಾಯಿಗಳಿಗೆ ಅಂದಾಜು ಕಳುಹಿಸಿ ಇದನ್ನ ಲೋಕಲ್‌ಫಂಡ್ ಬೋರ್ಡಿನವರ ವಪ್ಪಿತಕ್ಕಾಗಿ ಯಿಡಿಸಬೇಕೆಂದು ಬರಸಿದ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ವೇ 26ನೇ ಮುಕ್ತಂ 457ನೇ ನಂಬರ್ ಲೆಟರನ್ನ ವೋದಲಾಯಿತು. ಮುಂದಿನ ವಿುಟಿಂಗಿನಲ್ಲಿ ಈ ವಿಚಾರವನ್ನ ಯೋಚಿಸತಕ್ಕದ್ದೆಂದು ತೀರ್ಮಾನವಾಯಿತು.

6. ತುಮಕೂರು, ಪುರಡಗೆರೆ ರಸ್ತೆ 5ನೇ ವೈಲಿ ಲಾಗಾಯತು ಅರೆಗುಜ್ಜನಹಳ್ಳಿ ವೇಲೆ ಪುರಡಗೆರೆಗೆ ವಂದು ಭಂಡಿಜಾಡನ್ನೂ ಯಿರಕನಂದ್ಯದಿಂದ ಪಾವಗಡ್ಕಾರಿಗೆ ವಂದು ಭಂಡಿಜಾಡನ್ನೂ ಹಾಕತಕ್ಕದ್ದಕ್ಕೆ ಅಂದಾಜಿನಿ ಬಂದ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ಜೂ 1ನೇ ಮುಕ್ತಂ 495ನೇ ನಂಬರ್ ಲೆಟರನ್ನ ವೋದಲಾಯಿತು. ಈ ಕಾಮುಗಾರಿಗೆ ಬೇಕಾಗುವ ವೊಬಲಗನ್ನ 1896—97ನೇ ಸಾಲಿನ ಡಿಸ್ಟ್ರಿಕ್ಟುಫಂಡ್ ಸಪ್ಲಿಮೆಂಟಲ್ ಬಜ್ಜಟ್ಟಿನಲ್ಲಿ ಪಬ್ಲಿಕ್‌ವರ್ಕ್ಸ್ ಇಲಾಖೆಯವರಿಂದ ನಡಿಸಲ್ಪಡಬೇಕಾದ ಕಾಮುಗಾರಿಗಳಲ್ಲಿ ಕೇರಿಸತಕ್ಕದ್ದೆಂದು ತೀರ್ಮಾನವಾಯಿತು.

7. ಸಿರಾ, ಹುಲಿಯೂರುದುರ್ಗ, ಹುಳಿಯಾರದಲ್ಲಿ ಕಟ್ಟಬೇಕಾಗಿರುವ ಮುಸಾಫರಿಖಾನೆಗಳ ಅಂದಾಜುಗಳನ್ನ 1896—97ನೇ ಸಾಲಿನ ಡಿಸ್ಟ್ರಿಕ್ಟು ಫಂಡ್ ಸಪ್ಲಿಮೆಂಟ್ ಬಜ್ಜಟ್ಟಿ ಮಂಜೂರಾಗಿ ಬಂದ ತರುವಾಯ ಮಂಜೂರೀ ಬಗ್ಗೆ ಪುನಹ ಕಳುಹಿಸಲ್ಪಡುತ್ತ ಸಪ್ಲಿಮೆಂಟಲ್ ಬಜ್ಜಟ್ಟಿ ಮಂಜೂರಾಗುವ ವರಿಗೂ ಸದರೀ ಅಂದಾಜುಗಳನ್ನ ಚೀಫ್ ಇಂಜೀಯರ್ ಸಾಹೆಬರವರು ಮಂಜೂರ್ಮಾಡುವದಿಲ್ಲ ವೆಂದು ತಲ್ಪಿದ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ಆಗಸ್ಟ್ 1ನೇ ಮುಕ್ತಂ 806ನೇ ನಂಬರ್ ಲೆಟರನ್ನ ವೋದಲಾಯಿತು. 1896—97ನೇ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಜ್ಜಟ್ಟಿನಲ್ಲಿ ಈ ಕಾಮಗಾರಿಗಳನ್ನ ಕೇರಿಸಬೇಕೆಂದು ತೀರ್ಮಾನವಾಯಿತು.

8. ಯಾಡಿಯೂರು, ತಿಪಟೂರ ರಸ್ತೆ 6—30ನೇ ಮೈಲಿಯಲ್ಲಿ ವಂದುನೂರು ರೂಪಾಯಿಗಳಲ್ಲಿ ಹಾಲಿ ಸುಟ್ಟಕಲ್ಲು ಮೊಹರಿ ಇರುವದನ್ನ ಮುಂದಕ್ಕೆ ಬಡಾಯಿನತಕ್ಕದ್ದಕ್ಕೆ ಅಂದಾಜಾನಿತಿ ಬರಸಿದ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ಆಗಸ್ಟ್ 1ನೇ ಮುಕ್ತಂ 809ನೇ ನಂಬರ್ ಲೆಟರ್ ವೋದಲಾಯಿತು. 1896—97ನೇ ಸಾಲಿನ ಡಿಸ್ಟ್ರಿಕ್ಟುಫಂಡ್ ಬಜ್ಜಟ್ಟಿನಲ್ಲಿ ಈ ಕಾಮಗಾರಿಯನ್ನ ಕೇರಿಸತಕ್ಕದ್ದೆಂದು ತೀರ್ಮಾನವಾಯಿತು.

9. ತಿಪಟೂರು ತಾಲ್ಲೂಕು ನೋಣವಿನಕೆರೆ ಯಿಂದ ವಿಘ್ನಸಂತೆಗೆ ಇರತಕ್ಕ ಭಂಡಿಜಾಡನ್ನ ದುರಸ್ತು ಪಡಿಸುವೆದಕ್ಕೆ ತಖಮಾರಾದ 587 ರೂಪಾಯಿನ ಅಂದಾಜಾ 1895ನೇ ಇಸವಿ ಮೇ 1ನೇ ಮುಕ್ತಂ 488ನೇ ನಂಬರ್ ಲೆಟರ್ ಕೂಡಾ ಯಡಿಯೂರ ರಸ್ತೆ ಬಗ್ಗೆ ಕಳುಹಿಸಿದ್ದ ಸಂಗತಿ ಯಿತ್ಯರ್ಥ ಪಡಿಸಬೇಕೆಂದು ತಲ್ಪಿದ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ಜುಲೈ 14ನೇ ಮುಕ್ತಂ 740ನೇ ನಂಬರ್ ಡಾಕೆಟ್ಟನ್ನ ವೋದಲಾಯಿತು. ಮುಂದಿನ ಬಜ್ಜಟ್ ಮಿಟಿಂಗಿನ ವರಿಗೆ ಈ ವಿಚಾರ ನಿಲ್ಲಿಸಿರತಕ್ಕದ್ದೆಂದು ತೀರ್ಮಾನವಾಯಿತು.

10. 1896—97ನೇ ಸಾಲಿಗೆ ಪಬ್ಲಿಕ್‌ವರ್ಕ್ಸ್ ಇಲಾಖೆ ಯಿಂದ ನಡಿಸಲ್ಪಡುವ ಕಾಮಗಾರಿಗಳಿಗೆ ವಂದು ರಿವೈಜಡ್ ಬಜ್ಜಟ್ಟನ್ನ ಕಳುಹಿಸಿ ಇದನ್ನ ಬೋರ್ಡಿನವರ ವಪ್ಪಿತಕ್ಕೆ ಇಟ್ಟು ನಂತರ ಗವರ್ಮೆಂಟಿನ ಮಂಜೂರಾತಿ ಬಗ್ಗೆ ಕಳುಹಿಸಿ ಕೊಡಬೇಕೆಂದು ತಲ್ಪಿರುವ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ಆಗಸ್ಟ್ 8ನೇ ಮುಕ್ತಂ 843ನೇ ನಂಬರ್ ಲೆಟರನ್ನ ವೋದಲಾಯಿತು. ಇದನ್ನ 1896—97ನೇ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಜ್ಜಟ್ಟಿನಲ್ಲಿ ಕೇರಿಸಬೇಕೆಂದು ತೀರ್ಮಾನವಾಯಿತು.

11. ತುಮಕೂರು ಡಿಸರ್ವೆನರಿಗೆ ಟೌಪೇಷನ್ ವಾರಡು ಕಟ್ಟತಕ್ಕದಕ್ಕೆ 3,018 ರೂಪಾಯಿ ಖರ್ಚು ಬಿದ್ದಿರುವ ನಂದರ್ಭದಲ್ಲಿ 1893ನೇ ಇಸವಿ ಅಕ್ಟೋಬರ್ 16ನೇ ಮುಕ್ತಂ 7041.—53 L. F. 117.—93ನೇ ನಂ. ಗವರ್ಮೆಂಟ್ ಆರ್ಡರನ್ನ ಅನುಸರಿಸಿ, ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟು ಫಂಡ್ ಬಾಬುಗಳಿಂದ ಕೊಡಿಸಬೇಕಾಗುವ ಮೊಬಲಗುಗಳನ್ನ ಕಂಟ್ರೋಲರ್ ಸಾಹೆಬರವರ ಮೂಲಕ ಪಬ್ಲಿಕ್ ವರಕ್ಸ್ ಇಲಾಖೆಯವರ ಸ್ವಾಧೀನದಲ್ಲಿ ಇಡಸಬೇಕೆಂತಲು ಈ ಮೊಬಲಗು ಮಂಜೂರಾಗಿರುವ 1896—97ನೇ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಜ್ಜಟ್ಟಿನಲ್ಲಿ ಕೇರಿದೆಯಿರುವ ಪಕ್ಷ—ಸಪ್ಲಿಮೆಂಟ್ ಬಜ್ಜಟ್ಟಿನಲ್ಲಿ ಕೇರಿಸಬೇಕೆಂತಲು ಬದಸ್ತೂರು, ಸದರೀ ಡಿಸರ್ವೆನರಿಗೆ ಬಂದು ಡೆಡ್‌ಹೌಸ್ ಯಾ ಬಿದ್ದ ಹಟ್ಟಯನ್ನ 330 ರೂಪಾಯಿನ ಅಂದಾಜಾದಲ್ಲಿ ತಯಾರಾಗತಕ್ಕ ಮತ್ತು 540 ರೂಪಾಯಿ ಅಂದಾಜಾ ಖರ್ಚಿನಲ್ಲಿ ತಯಾರಾಗಬೇಕಾದ ಸರ್ವಿ ಡಿಸರ್ವೆನರಿಗೆ ಬಡಾಯಿಸಿ ಕಟ್ಟತಕ್ಕ ಶಸ್ತ್ರಚಿಕಿತ್ಸೆಶಾಲೆ ಯಾ ಸರಜಿಕಲ್ ಆಪರೇಷನ್ ರೂಂಗಳಿಗೆ ತಗಲತಕ್ಕ ಖರ್ಚಿನ ಯರಡು ಫಂಡಿನ ಹಿಸ್ಸೇ ಮೊಬಲಗನ್ನ ಸಹ ಕೇರಿಸಬೇಕೆಂತಲೂ ಸಹ ಬರಸಿದ ಯಗ್ಜಿಕ್ಯೂಟಿವ್ ಯಿಂಜಿನಿಯರ್ ಸಾಹೇಬರವರ 1896ನೇ ಇಸವಿ ಆಗಸ್ಟ್ 11ನೇ ಮುಕ್ತಂ 853ನೇ ನಂಬರು ಡಾಕೆಟ್ಟನ್ನ ವೋದಲಾಯಿತು. ಮೇಲ್ಕಂಡ ಕಾಮಗಾರಿಗಳಿಗೆ ಡಿಸ್ಟ್ರಿಕ್ಟು ಫಂಡಿನಿಂದ ಕೊಡಲ್ಪಡಬೇಕಾಗುವ 3ರಲ್ಲಿ ಬಂದು ಹೆಸ್ಸೆ ಮೊಬಲಗು 1006—110 ಮತ್ತು 180 ರೂಪಾಯಿಗಳನ್ನ ಸಪ್ಲಿಮೆಂಟಲ್ ಬಜ್ಜಟ್ಟಿನಲ್ಲಿ ಕಂಟ್ರಿಬ್ಯೂಷನ್ ಯಂಬ ಹೆಡಿನಲ್ಲಿ ಕೇರಿಸತಕ್ಕದ್ದೆಂದು ತೀರ್ಮಾನವಾಯಿತು.

12. ತುಮಕೂರಲ್ಲಿ ಹೆಂಗಸರ ಮತ್ತು ಮಕ್ಕಳ ಡಿಸ್ಪೆನ್ಸರಿ ಯಿಟ್ಟುರತಕ್ಕ ಮನೆ ಕೆಲವುಭಾಗ ಲೇಡಿ ಹಾಸ್ಪಿಟಲ್ ಅಸಿಸ್ಟೆಂ[illegible]ಸಕ್ಕಾಗಿ ಉಪಯೋಗಿಸಿಕೊಂಡಿರುವೆದರ ಬಾಡಿಗೆ ಮಾಹೆಯಾನಾ ಈವರು ಕೊಡುತ್ತಲಿರುವ ಹತ್ತು ರೂಪಾಯಿಗಳನ್ನ [illegible]ಗೆ ತಗ್ಗಿಸತಕ್ಕ ವಿಚಾರದಲ್ಲಿ ಬೋರ್ಡಿನವರ ಅಭಿಪ್ರಾಯ ತಿಳಿಯಲಪೇಕ್ಷಿತವಾದ 1896ನೇ ಇಸವಿ ಜೂರ್ 24ನೇ ಮುಕ್ತಂ [illegible]-L. F. 78—94ನೇ ನಂಬರು ಗವರ್ಮೆಂಟ್ ಪ್ರೊಸೀಡಿಂಗ್ಸ್‌ನ್ನ ವೋದಲಾಯಿತು, ಲೇಡಿ ಹಾಸ್ಪಿಟಲ್ ಅಸಿಸ್ಟೆಂಟರು ಹಾಲಿ [illegible]ಲಿರುವ ಬಾಡಿಗೆಯನ್ನ ತಗ್ಗಿಸಲು ಬೋರ್ಡಿನವರು ಅಭಿಪ್ರಾಯ ಪಡುವದಿಲ್ಲವೆಂತಲು ವಂದು ವೆಳೆ ತಗ್ಗಿಸಿದಲ್ಲಿ ಈ ಮೊಬಲಗಿನ [illegible]ಯಾವ ಭಾಗವನ್ನಾದರೂ ಡಿಸ್ಟ್ರಿಕ್ಟು ಫಂಡಿನಿಂಡ ಭರ್ತಿಮಾಡಲು ಆಗುವದಿಲ್ಲವೆಂತಲು ಸಹ ಗವರ್ಮೆಂಟಿಗೆ ಲೆಟರು ಬರಸತಕ್ಕದ್ದೆಂತ ತೀರ್ಮಾನವಾಯಿತು.

ಎಂ. ನಾರಾಯಣರಾವ್,
ಪ್ರೊಸಿಡೆಂಟ್ ಡಿಸ್ಟ್ರಿಕ್ಟು ಫಂಡ್ ಬೋರ್ಡ್.

ತಾರೀಖು 9ನೇ ಸೆಪ್ಟಂಬರ್ 1896ನೇ ಇಸವಿ.

ತುಮಕೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟುಗಳ ಬಾಬತು ಕಲ್ಲುಹುವ್ವು ಮತ್ತು ಆರಗು ಜಮಾಯಿಸಿಕೊಳ್ಳತಕ್ಕ ಹಕ್ಕನ್ನ 1896ನೇ ಇಸವಿ ಸೆಪ್ಟಂಬರ್ 4ನೇ ತಾರೀಖಿನಲ್ಲಿ ಹರಾಜು ಮಾಡಲಿಲ್ಲವಾದ ಪ್ರಯುಕ್ತ ಪುನಹ ಇದರಿಂದ ಸಮಸ್ತ ಜನರಿಗೂ ತಿಳಿಯು ಪಡಿಸುವದೇನಂದರೆ,—ಮೇಲೆ ನಮೂದಿಸಲ್ಪಟ್ಟಿರುವ ಜಿನಸಿಗಳ ಹರಾಜನ್ನು 1896ನೇ ಇಸವಿ ಆಗಸ್ಟ್ 13ನೇ ಮುಕ್ತಂ ಮೈಸೂರ ಗೆಜೆಟ್ 2ನೇ ಭಾಗ 753, 754ನೇ ಪುಟಗಳಲ್ಲಿ ಛಾಪಿಸಿರುವ ಷರತ್ತುಗಳನುಸರಿಸಿ, ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ಟು ಆಫಿಸರವರಿಂದಲಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಸಬ್ ಅಸಿಸ್ಟೆಂಟ್ ಕ್ವಾರ್ಟರ್‌ವೇಟರವರಿಂದಲಾಗಲಿ 1896ನೇ ಇಸವಿ ಅಕ್ಟೋಬರ್ ತಾರೀಖು 3ನೇ ದಿವಿ 12 ಘಂಟೆಯಲ್ಲಿ ಬಹಿರಂಗವಾಗಿ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ಟು ಆಫಿಸಿನಲ್ಲಿ ಹರಾಜ್ ಮಾಡಲ್ಪಡುತ್ತೆ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ಟು ಆಫಿಸರ್.